# ಸಿಂಪಲ್ ಪಾತ್ರದ ಸೆಳೆತದಲ್ಲಿ ಸಂಜನಾ

**ಕನ್ನಡದೊಂದಿಗೆ ತೆಲುಗು ಸಿನಿಮಾರಂಗದಲ್ಲಿಯೂ ಮಿಂಚುತ್ತಿರುವ ನಟಿ ಸಂಜನಾ ಆನಂದ್, ಯುವ ರಾಜ್‌ಕುಮಾರ್‌ಗೆ ಜೋಡಿಯಾಗಿ 'ಎಕ್ಕ' ಸಿನಿಮಾ ಮೂಲಕ ತೆರೆಗೆ ಬರುತ್ತಿದ್ದಾರೆ. ಅವರ ನಟನೆಯ 'ಹಯಗ್ರೀವ', 'ಮುಧೋಳ್' ಸಿನಿಮಾಗಳು ಕೂಡ ಬಿಡುಗಡೆಗೆ ಸಿದ್ಧವಾಗಿವೆ.**

■ ಸುಮಲತಾ ಎನ್.



'ಬ್ಯಾಂಗಲ್ ಬಂಗಾರಿ... ಚಾಕ್ಲೇಟ್ ಕಣ್ಣಲ್ಲೆ ಹೊಡೆದ್ಲು ಲಗೋರಿ...' ಈಚೆಗೆ ಬಿಡುಗಡೆಯಾಗಿರುವ 'ಎಕ್ಕ' ಸಿನಿಮಾದ ಈ ಹಾಡು ಮಾತ್ರವಲ್ಲ, ಹಾಡಿನಲ್ಲಿ ಸಿಂಪಲ್ ಲುಕ್‌ನಲ್ಲಿ ಕುಣಿದು ಕುಪ್ಪಳಿಸಿರುವ ನಟಿ ಸಂಜನಾ ಆನಂದ್ ಕೂಡ ಜನರ ಮನಗೆದ್ದಿದ್ದಾರೆ.

'ಕೆಮಿಸ್ಟ್ರಿ ಆಫ್ ಕರಿಯಪ್ಪ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿದ್ದ ನಟಿ ಸಂಜನಾ ಆನಂದ್, ಮೊದಲ ಸಿನಿಮಾ ಮುಗಿಯುತ್ತಿದ್ದಂತೆಯೇ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುವ ಅವಕಾಶ ಗಿಟ್ಟಿಸಿಕೊಂಡವರು. 'ವಿಂಡೊ ಸೀಟ್'. 'ಶೋಕಿವಾಲ', 'ಕ್ಷತ್ರಿಯ', 'ಸಲಗ', 'ರಾಯಲ್'... ಹೀಗೆ ಕನ್ನಡದ ಹಲವು ಸಿನಿಮಾಗಳಲ್ಲಿ ತಮ್ಮ ನಟನೆಯ ವೈಖರಿಯಿಂದಲೇ ಜನರ ಮನದಲ್ಲುಳಿದವರು ಕೂಡ.

ಇದೀಗ ಯುವ ರಾಜ್‌ಕುಮಾರ್ ಜೊತೆ 'ಎಕ್ಕ' ಸಿನಿಮಾದಲ್ಲಿ ನಟಿಸುತ್ತಿದ್ದು, ಈ ಸಿನಿಮಾದಲ್ಲಿನ ಪಾತ್ರ, ತಾವು ಬಯಸುತ್ತಿದ್ದ ಅವಕಾಶವೊಂದನ್ನು ತಂದುಕೊಟ್ಟಿರುವುದಾಗಿ ಹೇಳಿದ್ದಾರೆ. ಈ ಪಾತ್ರದ ಬಗ್ಗೆ ವಿಶೇಷ ಒಲವು ತಮಗಿರುವುದಾಗಿಯೂ ಹೇಳಿದ್ದಾರೆ.

''ಎಕ್ಕ' ಸಿನಿಮಾದಲ್ಲಿ ನನ್ನ ಪಾತ್ರ ರಿಯಲಿಸ್ಟಿಕ್ ಆಗಿದೆ. ಸಾಮಾನ್ಯ ಮಧ್ಯಮ ವರ್ಗದ ಹುಡುಗಿಯ ಪಾತ್ರ. ಸೇಲ್ಸ್ ಹುಡುಗಿಯಾಗಿ ಬಣ್ಣ ಹಚ್ಚಿದ್ದೇನೆ. ನನ್ನ ಪಾತ್ರ ಡಿ–ಗ್ಲಾಮ್ ಆಗಿದೆ. ಅಭಿನಯದ ಮೇಲಷ್ಟೆ ಅವಲಂಬಿತವಾಗಿದೆ. ನಟನೆಗೆ ತುಂಬಾ ಸ್ಕೋಪ್ ಸಿಕ್ಕಿದೆ'' ಎಂದು ವರ್ಣಿಸಿದ್ದಾರೆ.

ಅಂದಹಾಗೆ, ಈ ಸಿನಿಮಾದ ಬಹುಪಾಲು ಸಂಜನಾ ಮೇಕಪ್ ಇಲ್ಲದೇ ನಟಿಸಿದ್ದಾರಂತೆ.

'ಈ ಸಿನಿಮಾದಲ್ಲಿ ನಾನು ಮೇಕಪ್ ಹಾಕಿಲ್ಲ. ನನ್ನ ಪಾತ್ರ ತುಂಬಾ ರಿಯಲ್ ಆಗಿ ಕಾಣಬೇಕು ಎಂದು ಮೇಕಪ್ ಇಲ್ಲದೇ ನಟಿಸಿದ್ದೇನೆ. ಇದೊಂದು ರೀತಿ ಭಿನ್ನ ಅನುಭವ' ಎಂದಿದ್ದಾರೆ.

ಯುವ ರಾಜ್ ಜೊತೆ ನಟಿಸಿದ ಅನುಭವಗಳನ್ನು ಹಂಚಿಕೊಳ್ಳುತ್ತಲೇ, 'ನಾನು ಅಪ್ಪು ಸರ್ ಅಪ್ಪಟ ಅಭಿಮಾನಿ. ಅವರ ಸಿನಿಮಾಗಳನ್ನು ನೋಡುತ್ತಲಿದ್ದವಳು. ಈಗ ಅವರ ಕುಟುಂಬದ ಯುವ ಜೊತೆ ನಟಿಸುತ್ತಿರುವುದು ತುಂಬಾ ಖುಷಿ ಇದೆ. ಅದೂ ಪಿಆರ್‌ಕೆ ಬ್ಯಾನರ್‌ನಲ್ಲಿ ಸಿನಿಮಾ ಮೂಡಿಬರುತ್ತಿರುವುದು ಮತ್ತೂ ಖುಷಿ. ಯುವ ಕೂಡ ಭಿನ್ನ ಗೆಟಪ್‌ನಲ್ಲಿದ್ದಾರೆ' ಎಂದು ಸಂತೋಷದಿಂದ ಹೇಳಿಕೊಂಡಿದ್ದಾರೆ.

ಈಚೆಗೆ ಬಿಡುಗಡೆಯಾಗಿರುವ 'ಬ್ಯಾಂಗಲ್ ಬಂಗಾರಿ...' ಹಾಡಿನ ಕುರಿತು ಮಾತು ಹೊರಳಿಸುತ್ತ, 'ಸಿನಿಮಾದ ಬ್ಯಾಂಗಲ್ ಬಂಗಾರಿ ಹಾಡಿಗೆ ಬಹಳ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತಿದೆ. ಈ ಹಿಂದೆ 'ಗೌರಿ' ಸಿನಿಮಾದಲ್ಲಿಯೂ ವಿಶೇಷ ಹಾಡೊಂದಕ್ಕೆ ನೃತ್ಯ ಮಾಡಿದ್ದೆ. ಅದಕ್ಕೂ ಉತ್ತಮ ಪ್ರಶಂಸೆ ವ್ಯಕ್ತವಾಗಿತ್ತು' ಎಂದು ಮೆಲುಕು ಹಾಕಿದ್ದಾರೆ.

ಕನ್ನಡದಿಂದ ತೆಲುಗು ಸಿನಿಮಾರಂಗದೆಡೆಗೂ ತಮ್ಮ ಹರವು ವಿಸ್ತರಿಸಿಕೊಂಡಿದ್ದಾರೆ ಸಂಜನಾ ಆನಂದ್. ಅವರ ನಟನೆಯ ತೆಲುಗು ಸಿನಿಮಾವೊಂದು ಬಿಡುಗಡೆ ಆಗಿದ್ದು, ಮತ್ತೊಂದು ಸಿನಿಮಾ ಚಾಲ್ತಿಯಲ್ಲಿದೆ.

'ಹಯಗ್ರೀವ' ಹಾಗೂ 'ಮುಧೋಳ್' ಸಿನಿಮಾಗಳು ಕೂಡ ಬಿಡುಗಡೆಗೆ ಸಿದ್ಧವಾಗಿದ್ದು, ಮತ್ತಷ್ಟು ಕಥೆಗಳನ್ನು ಕೇಳುತ್ತಿದ್ದಾರೆ ಸಂಜನಾ. ■

